
# ಈ ಕರಾವಳಿ ನಿಮ್ಮದೇ



ಸಿ. ಅರ್. ಜೆಡ್ ಎಂದರೇನು?

ಕರಾವಳಿ ನಿಯಂತ್ರಣ ಅಧಿಸೂಚನೆ ೨೦೧೧ಯು ಕರಾವಳಿ ಪ್ರದೇಶದ ಒಳಿತಿಗಾಗಿ ಸರಕಾರ ಹೊರಡಿಸಿದದ್ದ ಒಂದು ನೋಟೀಸು ಆಗಿರುತ್ತದೆ

೧ ಈ ನೋಟೀಸಿನ ಮುಖ್ಯ ಉದ್ದೇಶ ಕರಾವಳಿಯಲ್ಲಿ ವಾಸಿಸುವ ಜನತೆಯ ಜೀವನಶೈಲಿಯನ್ನು ಉಳಿಸುವುದಾಗಿದೆ

೨ ಕರಾವಳಿಯ ಪರಿಸರವನ್ನು ಸಂರಕ್ಷಿಸುವ ಮತ್ತು

೩ ಕರಾವಳಿ ಭಾಗದ ಆರ್ಥಿಕ ಅಭಿವೃದ್ಧಿಗಾಗಿ ಅವಶ್ಯಕವಾದ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು


ಈ ಅಧಿಸೂಚನೆ ಕರಾವಳಿ ಭಾಗವನ್ನು ನಾಲ್ಕು ವಿಭಾಗಗಳನ್ನಾಗಿ ವಿಂಗಡಿಸುತ್ತದೆ,

ಸಿ.ಆರ್.ಜೆಡ್. ೧ ಭರತ ರೇಖೆ ಮತ್ತು ಇಳಿತ ರೇಖೆಯ ನಡುವಿನ ಪ್ರದೇಶವಾಗಿದೆ, ಮತ್ತು ಕಾಂಡ್ಲ ಮತ್ತು ಮರಳುದಿಣ್ಣೆಯಂತಹ ಪರಿಸರ ದೃಷ್ಟಿಯಿಂದ ಬಲು ನಾಜೂಕಾದ ಪ್ರದೇಶ

ಸಿ.ಆರ್.ಜೆಡ್ ೨ ವಿಭಾಗವು ಈಗಾಗಲೇ ಅಭಿವೃದ್ಧಿಯಾದ ಮತ್ತು ನಗರ ಪ್ರದೇಶಗಳನ್ನು ಒಳಗೊಂಡಿರುತ್ತದೆ

ಸಿ.ಆರ್.ಜೆಡ್ ೩ ಇದು ಅಭಿವೃದ್ಧಿ ಹೊಂದಿರದ ಮತ್ತು ಗ್ರಾಮೀಣ ಪ್ರದೇಶವಗಿರುತ್ತದೆ ಹಾಗು ಪರಿಸರ ದೃಷ್ಟಿಯಿಂದ ಬಲು ನಾಜೂಕಾದ ಪ್ರದೇಶದಡಿಯಲ್ಲಿ ಪರಿಗಣನೆಯಾಗಿರುವುದಿಲ್ಲ. ಇದು ೨ ವಿಭಾಗವನ್ನ ಹೊಂದಿದೆ. ಭರತ ರೇಖೆಯಿಂದ ೨೦೦ಮೀಟರ್ ವರೆಗಿನ ಪ್ರದೇಶ ಅಭಿವೃದ್ಧಿ ನಿಷೇದ ಪ್ರದೇಶ ಮತ್ತು ೨೦೦ರಿಂದ೫೦೦ ಮೀಟರ್ ವರೆಗಿನ ಪ್ರದೇಶ.

ಸಿ.ಆರ್.ಜೆಡ್ ೪ ಸಮುದ್ರ ಸಂದರ್ಭದಲ್ಲಿ ಇಳಿತದ ರೇಖೆಯಿಂದ ಸಾಗರ ಜಲ ಸೀಮಾ ಮಿತಿಯವರೆಗಿನ ೧೨ ನಾಟಿಕಲ್ ಮೈಲಿ ಪ್ರದೇಶ ಮತ್ತು ಉಬ್ಬರವಿಳಿತ ಪ್ರಭಾವಿತ ಜಲ ನಿಕಾಯಗಳ ಸಂದರ್ಭದಲ್ಲಿ ಒಂದು ದಂಡೆಯ ಇಳಿತ ರೇಖೆಯಿಂದ ಅದರ ಎದುರು ದಂಡೆಯ ಇಳಿತ ರೇಖೆ ನಡುವೆ ಇರುವ ನೀರು ಮತ್ತು ಪಾತ್ರ ಪ್ರದೇಶ.



ಕರಾವಳಿ ನಿಯಂತ್ರಣ ವಲಯ (ಸಿ ಆರ್ ಜೆಡ್)
ದ ಗಡಿ ಮತ್ತು ವಲಯಗಳು
೧೨ ನಾಟಿಕಲ್ ಮೈಲುಗಳು
೪
ಸಮುದ್ರ
* ಉಬ್ಬರವಿಳಿತ ಪ್ರಭಾವಕ್ಕೊಳಗಾದ ಜಲನಿಕಾಯಗಳ ಉದ್ದಕ್ಕೂ ಎಷ್ಟು ದೂರದವರೆಗೆ ಅಭಿವೃದ್ಧಿಯನ್ನು ನಿಯಂತ್ರಿಸಬೇಕು ಎಂಬುದನ್ನು ಉಬ್ಬರವಿಳಿತದ ಪರಿಣಾಮಗಳನ್ನು ಎಷ್ಟು ದೂರದವರೆಗೆ ಅನುಭವಿಸಲಾಗುತ್ತಿದೆ ಎಂಬುದರ ಆಧಾರದ ಮೇಲೆ ನಿರ್ಧರಿಸತಕ್ಕದ್ದು. ಇದನ್ನುವರ್ಷದ ಅತಿ ಶುಷ್ಕ ಅವಧಿಯಲ್ಲಿ ಅಳತೆ ಮಾಡುವಾಗ ಸಾವಿರಕ್ಕೆ ಐದು ಭಾಗದಸ್ಟು ಉಪ್ಪಿನಂಶದ ಸಾಂಧ್ರತೆಯನ್ನು ಆಧರಿಸಿ ನಿರ್ಣಯಿಸಲಾಗುತ್ತದೆ. ಎಲ್ಲಿಯವರೆಗೆ ಉಬ್ಬರ ಇಳಿತಗಳ ಪರಿಣಾಮಗಳನ್ನುಅನುಭವಿಸಲಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸಬೆಕು ಮತ್ತು ಅದರಂತೆ ಕರಾವಳಿ ವಲಯ ನಿರ್ವಹಣಾ ಯೋಜನೆಗಳಲ್ಲಿ (CZMP) ಗುರುತು ಮಾಡಬೇಕು
ಇಳಿತ
ಇಳಿತ
೧
೧
ಉಬ್ಬರ
ಉಬ್ಬರ
೪
೨
೫೦೦
ಮೀಟರುಗಳು
ಅಭಿವೃದ್ಧಿ
ನಿಷೇಧಿತ
೨೦೦
ಮೀಟರುಗಳು
೩
೫೦೦
ಮೀಟರುಗಳು
< ೧೦೦
ಮೀಟರುಗಳು
< ೧೦೦
ಮೀಟರುಗಳು**
ಅಳಿವೆ*
೧೦೦
ಮೀಟರುಗಳು**
> ೧೦೦
ಮೀಟರುಗಳು
ಸಿ.ಆರ್.ಜೆಡ್ ೧
ಸಿ.ಆರ್.ಜೆಡ್ ೨
ಸಿ.ಆರ್.ಜೆಡ್ ೩
ಅಭಿವೃದ್ಧಿ ನಿಷೇಧಿತ ಪ್ರದೇಶ
ಸಿ.ಆರ್.ಜೆಡ್ ೩
೨೦೦ - ೫೦೦ ಮೀ
ಸಿ.ಆರ್.ಜೆಡ್ ೪
ಭೂಭಾಗ
** ಉಬ್ಬರ ವಿಳಿತಗಳ ಪ್ರಭಾವಕ್ಕೆ ಒಳಗಾಗುವ ಜಲನಿಕಾಯಗಳ ಜಲ ಪ್ರದೇಶವನ್ನ ಒಳಗೊಂಡು, ಸಿ.ಆರ್.ಜೆಡ್ ೩ ಅಭಿವೃದ್ಧಿ ನಿಷೇಧ ಪ್ರದೇಶವು ಸಮುದ್ರ ಸಂಪರ್ಕಿತವಾದ ಉಬ್ಬರವಿಳಿತದಿಂದ ಜಲನಿಕಾಯಗಳ ಕಡೆಗೆ ೧೦೦ಮೀಟರುಗಳು ಅಥವಾ ಸಂದು ಕಡಲಿನ ಅಗಲ ಇವೆರಡರಲ್ಲಿ ಯಾವುದು ಕಡಿಮೆಯೋ ಆ ಪ್ರದೇಶ


## ಸಿ.ಆರ್.ಜೆಡ್ ಪ್ರದೇಶದಲ್ಲಿ ಯಾವುದಕ್ಕೆ ಅನುಮತಿ ನೀಡಲಾಗಿದೆ?

ಅನುಮತಿ ಇರುವುದು *

ಅನುಮತಿ ಇಲ್ಲದಿರುವುದು

ಯಾವುದೇ ಮಾಹಿತಿ ಇಲ್ಲ

* ಇವುಗಳನ್ನು ಅನುಮತಿಸಲಾಗಿದ್ದರೂ ಕೂಡ ಯಾವುದೇ ಚಟುವಟಿಕೆಗಳನ್ನು ನಡೆಸುವ ಮೊದಲು ಸಿಆರ್. ಝಡ್ ಅನುಮತಿ ಯನ್ನು ಪಡೆಯತಕ್ಕದ್ದು




ಸಿ.ಆರ್.ಜೆಡ್ ೧: ಸೂರ್ಯನ ಶಾಖವನ್ನು ಉಪಯೋಗಿಸಿ ಉಪ್ಪನ್ನು ತೆಗೆಯಬಹುದು.
ಅಭಿವೃದ್ಧಿ ರಹಿತ ಪ್ರದೇಶ: ಸಮುದ್ರದ ನೀರಿನಿಂದ ಉಪ್ಪನ್ನು ತಯಾರಿಸಬಹುದು.

ಎಲ್ಲಾ ವಿಭಾಗಗಳಲ್ಲಿ ಮೀನು ಮರಿಘಟಕ ಮತ್ತು ಮೀನು ಒಣಗಿಸುವುದನ್ನು ಅನುಮತಿಸಲಾಗಿದೆ

ಮೀನುಗಾರಿಕೆ ಮೂಲಸೌಕರ್ಯಗಳು ಅಂದರೆ ಮೀನು ಹರಾಜು ಕೇಂದ್ರ, ಬಲೆಸರಿಪಡಿಸುವ ಸ್ಥಳ, ಶೀತಲೀಕರಣ ಘಟಕ, ಇತ್ಯಾದಿ

ಸಾರ್ವಜನಿಕ ಸೌಲಭ್ಯಗಳು ಅಂದರೆ ಶೌಚಾಲಯ, ನೀರಿನ ಸೌಕರ್ಯ, ಶಾಲೆ ಮುಂತಾದವು.
ಸಿ. ಆರ್. ಜೆಡ್ ೧: ಸೂಕ್ಷ್ಮ ಪರಿಸರವಲ್ಲದ ಪ್ರದೇಶದಲ್ಲಿ ಅನುಮತಿ ನೀಡಲಾಗುವುದು.

ಸಿ.ಆರ್.ಜೆಡ್ ೨: ರಸ್ತೆಗಳಿದ್ದಲ್ಲಿ ಅಥವಾ ಈಗಿರುವ ಅಧಿಕೃತ ಕಟ್ಟಡಗಳಿದ್ದಲ್ಲಿ, ಅದರಿಂದ ಭೂಪ್ರದೇಶದ ಕಡೆಗೆ ಮಾತ್ರ ಕಟ್ಟಡಗಳನ್ನು ಕಟ್ಟಬಹುದು
ಅಭಿವೃದ್ಧಿ ರಹಿತ ಪ್ರದೇಶ: ಉಬ್ಬರಗೆರೆಯಿಂದ ೧೦೦ ಮತ್ತು ೨೦೦ ಮೀಟರುಗಳ ವರೆಗೆ, ಮೀನುಗಾರರು ಮತ್ತು ಸಾಂಪ್ರದಾಯಿಕ ಕರಾವಳಿ ಜನರು ಮನೆ ಕಟ್ಟಲು ಅಥವಾ ಮನೆಯ ಪುನರ್ ನಿರ್ಮಾಣಕ್ಕೆ ಅನುಮತಿನೀಡಲಾಗಿದೆ
ಸಿ.ಆರ್.ಜೆಡ್ ೩: ಈ ವಿಭಾಗದಲ್ಲಿ ವಾಸದಮನೆಗಳನ್ನು ಸಾಂಪ್ರದಾಯಿಕ ಹಕ್ಕು ಮತ್ತು ಉಪಯೋಗಗಳ ಮಿತಿಯಲ್ಲಿ ಅನುಮತಿ ನೀಡಬಹುದಾಗಿದೆ

ಉಬ್ಬರ ಗೆರೆ ಪ್ರದೇಶದಿಂದ ೨೦೦ ಮೀಟರುಗಳವರೆಗೆ: ಸ್ಥಳೀಯರಿಗೆ ಅವರ ಸ್ವಂತ ಉಪಯೋಗಕ್ಕೆ ಮಾತ್ರ ಅಂತರ್ಜಲವನ್ನು ತೆಗೆಯಲು ಅನುಮತಿಯಿದೆ.
ಉಬ್ಬರ ಗೆರೆಯಿಂದ ೨೦೦-೫೦೦ ಮೀಟರುಗಳವರೆಗೆ: ಈ ಪ್ರದೇಶದಲ್ಲಿ ಕುಡಿಯುವ ನೀರಿಗೆ, ಕೃಷಿ, ತೋಟಗಾರಿಕೆ, ಮತ್ತು ಮೀನುಗಾರಿಕೆಗಳಿಗೆ ಕೇವಲ ಕೈಪಂಪುಗಳನ್ನು ಉಪಯೋಗಿಸಿ, ಅಂತರ್ಜಲವನ್ನು ತೆಗೆಯಬಹುದು.
ಬೀಚ್ ರೆಸಾರ್ಟ್ಗಳು ಮತ್ತು ಹೋಟೆಲಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ, ೨೦೦ - ೫೦೦ ಮೀ ವಲಯದಲ್ಲಿ, ಕೇಂದ್ರ ಅಥವಾ ರಾಜ್ಯದ ಅಂತರ್ಜಲ ಮಂಡಳಿಯ (ಗ್ರೌಂಡ್ ವಾಟರ್ ಬೋರ್ಡ್) ಅನುಮತಿಯೊಂದಿಗೆ ಅಂತರ್ಜಲ ತೆಗೆಯಬಹುದು.

ಸಿ.ಆರ್.ಜೆಡ್ ೧ ರಲ್ಲಿ ಪೈಪ್ ಲೈನುಗಳನ್ನು ಅನುಮತಿಸಲಾಗಿದೆಯಾದರೂ, ಉಳಿದ ವಿಭಾಗಗಳಲ್ಲಿ ಅಗತ್ಯವಿದ್ದರೆ ಮಾತ್ರ ಅನುಮತಿಸಲಾಗಿದೆ.

ಹೋಟೆಲ್ ಮತ್ತು ರೆಸಾರ್ಟ್ ಗಳು ಅವುಗಳಿಗಾಗಿನ ಅಭಿವೃದ್ಧಿ ನಿರ್ದೇಶನಗಳನ್ನುಪಾಲಿಸಬೇಕು (ಅಧಿಸೂಚನೆಯ ಅನುಬಂಧ ೩).

ಪ್ರತಿಯೊಂದು ಸಿ.ಆರ್.ಜೆಡ್ ನ ಪ್ರತಿಯೊಂದು ವಿಭಾಗಗಳಲ್ಲೂ ತ್ಯಾಜ್ಯ ನಿರ್ವಹಣೆಗೆ ಪ್ರತ್ಯೇಕ ನಿಬಂಧನೆಗಳಿವೆ. ವಸತಿ ಸಂಕೀರ್ಣಗಳು, ರೆಸಾರ್ಟ್ ಗಳು, ನೀರು ಸಂಗ್ರಾಹಕಗಳು, ಹೀಗೆ ಎಲ್ಲದಕ್ಕೂ ಬೇರೆ ಬೇರೆ ರೀತಿಯ ಷರತ್ತುಗಳಿವೆ.

## ಸಿ.ಆರ್.ಜೆಡ್ ೨೦೧೧ರಲ್ಲಿ ಮೀನುಗಾರರಿಗೆ ಉಪಯೋಗವಾಗುವ ಸೌಲಭ್ಯಗಳೇನು?

- ಮೀನುಗಾರಿಕಾ ಪ್ರದೇಶಗಳು, ಮೀನು ಮರಿ ಹಾಕುವ ಪ್ರದೇಶಗಳು, ಮೀನುಗಾರರಿಗೆ ಅವಶ್ಯವಾದ ಮೂಲಭೂತ ಸೌಕರ್ಯಗಳನ್ನು ಕರಾವಳಿ ನಿರ್ವಹಣಾ ಯೋಜನೆಯಲ್ಲಿ ಸ್ಪಷ್ಟವಾಗಿ ಗುರುತಿಸಿರಬೇಕು.

- ಕರಾವಳಿ ಪ್ರದೇಶವು ಸುಸ್ಥಿರ ರೀತಿಯಲ್ಲಿ ಅಭಿವೃದ್ಧಿಯಾಗುವಂತೆ ನೋಡಿಕೊಳ್ಳುವುದು ಜನತೆಯ ಮತ್ತು ಸರಕಾರದ ಆದ್ಯ ಕರ್ತವ್ಯವಾಗಿದೆ ಕರಾವಳಿ ಪ್ರದೇಶದಲ್ಲಿ ತ್ಯಾಜ್ಯಗಳ ವಿಲೇವಾರಿ ಸರಿಯಾಗಿ ಮಾಡುವಂತೆ ನೋಡಿಕೊಳ್ಳುವುದರ ಮೂಲಕ ಕರಾವಳಿ ಜನತೆ ತೀರ ಪ್ರದೇಶದ ಸಂರಕ್ಷಣೆಯಲ್ಲಿ ತಾವೂ ಪಾಲ್ಗೊಳ್ಳಬಹುದು.

- ಸ್ಥಳೀಯ ಜನರ ಮತ್ತು ಮೀನುಗಾರರ ವಸತಿ ಸೌಲಭ್ಯಗಳ ಪುನರ್ ನಿರ್ಮಾಣ, ರಿಪೇರಿಯನ್ನು ಆ ನಗರ ಅಥವಾ ಗ್ರಾಮೀಣ ಭಾಗದ ಯೋಜನೆಯ ನಿಯಮಗಳಿಗನುಸಾರವಾಗಿ ಅನುಮತಿಸಬೇಕು.

- ಮೀನುಗಾರರ ಮೂಲಭೂತ ಸೌಕರ್ಯಗಳಾದ ಮೀನು ಬಲೆ ನೇಯುವುದು, ಐಸ್ ಪ್ಲಾಂಟ್, ಮೊದಲಾದ ಸೌಲಭ್ಯಗಳನ್ನು ಒದಗಿಸುವುದನ್ನು ಸೇರಿಸಲಾಗಿದೆ.

## ಸಿ.ಆರ್.ಜೆಡ್ ೨೦೧೧ ಕಾನೂನು ಜಾರಿಗೊಳಿಸುವಲ್ಲಿ ಮೀನುಗಾರರ ಪಾತ್ರ

ಜಿಲ್ಲಾ ಕರಾವಳಿ ನಿರ್ವಹಣಾ ಸಮಿತಿ:

ಈ ಸಮಿತಿಯು ಕರ್ನಾಟಕ ರಾಜ್ಯ ಕರಾವಳಿ ನಿರ್ವಹಣಾ ಪ್ರಾಧಿಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಜಿಲ್ಲಾ ಸಮಿತಿಗೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಈ ಸಮಿತಿಯು ಕನಿಷ್ಠ ಮೂರು ಸಾಂಪ್ರದಾಯಿಕ ಮೀನುಗಾರರ ಸಮುದಾಯದವರನ್ನು ಒಳಗೊಡಿರಬೇಕು.

ಕರಾವಳಿ ನಿರ್ವಹಣಾ ಯೋಜನೆ:

ಸಿ.ಆರ್.ಜೆಡ್೨೦೧೧ ರ ಪ್ರಕಾರ ರಾಜ್ಯ ಸರಕಾರವು ಕರಾವಳಿ ಪ್ರದೇಶದ ಅಭಿವೃದ್ಧಿಯನ್ನು ರೂಪಿಸಲು ಮತ್ತು ಮೀನುಗಾರರ ಸಮುದಾಯಕ್ಕೆ ಉಪಯೋಗವಾಗುವಂತೆ ದೂರಗಾಮಿ ಯೋಜನೆಯನ್ನು ಒಳಗೊಂಡಿರುವಂತೆ ಕಾರ್ಯಯೋಜನೆಯನ್ನು ಜಿಲ್ಲಾಮಟ್ಟದಲ್ಲಿ ಜನರ ಸಹಭಾಗಿತ್ವದಲ್ಲಿ ತಯಾರಿಸಬೇಕು. ತಯಾರಿಸಿದ ಯೋಜನೆಯನ್ನು ಕೇಂದ್ರ ಪರಿಸರ ಮಂತ್ರಾಲಯಕ್ಕೆ ಕಳಿಸುವುದಕ್ಕಿಂತ ಮೊದಲು, ಸಾರ್ವಜನಿಕ ಸಭೆಗಳ ಮೂಲಕ ಜನರ ಸಲಹೆ, ಸೂಚನೆ, ತಕರಾರುಗಳನ್ನು ಸ್ವೀಕರಿಸಿ, ಸೂಕ್ತ ಮಾರ್ಪಾಡುಗಳನ್ನು ಮಾಡಬೇಕು. ಒಮ್ಮೆ ಕೇಂದ್ರ ಮಂತ್ರಾಲಯದಿಂದ ಅನುಮತಿ ಪಡೆದ ನಂತರ ಎಲ್ಲ ಅಭಿವೃದ್ಧಿ ಯೋಜನೆಗಳು, ಕಾರ್ಯಚಟುವಟಿಕೆಗಳು ಕರಾವಳಿ ನಿರ್ವಹಣಾ ಯೋಜನೆಯ ಮುಖಾಂತರವೇ ನಿರ್ವಹಿಸತಕ್ಕದ್ದು

## ಸಿ ಆರ್ ಜೆಡ್. ಕಾನೂನು ಬಾಹಿರ ಕಾರ್ಯಗಳನ್ನು ಗುರುತಿಸುವುದು ಮತ್ತು ವರದಿ ಮಾಡುವುದು

ಸಿ ಆರ್ ಜೆಡ್. ಕಾನೂನು ಬಾಹಿರ ಚಟುವಟಿಕೆಗಳೆಂದರೇನು?

ಸಿ ಆರ್ ಜೆಡ್ ಅನುಮತಿ ಇಲ್ಲದೇ ೧೯೯೧ ರ ನಂತರ ಯಾವುದೇ ಸಿಆರ್ ಜೆಡ್ ಪ್ರದೇಶದಲ್ಲಿ ಬಂದ ಯೋಜನೆಗಳು

ಸಿ ಆರ್ ಜೆಡ್ ಅನುಮತಿ ಇಲ್ಲದೇ ೧೯೯೧ ರ ನಂತರ ಯಾವುದೇ ಸಿಆರ್ ಜೆಡ್ ಪ್ರದೇಶದಲ್ಲಿ ಬಂದ ಯೋಜನೆಗಳು, ಆದರೆ ಅನುಮತಿ ನೀಡುವಾಗ ವಿಧಿಸಿದ ನಿಬಂಧನೆಗಳನ್ನು ಪಾಲಿಸದೇ ಇರುವುದು.

ಸಿ ಆರ್ ಜೆಡ್. ಕಾನೂನು ಬಾಹಿರ ಚಟುವಟಿಕೆಗಳನ್ನು ವರದಿ ಮಾಡುವುದು ಹೇಗೆ?

ಯಾವುದೇ ಸಿ ಆರ್ ಜೆಡ್ ಕಾನೂನು ಪಾಲನೇ ಮಾಡದೇ ಇರುವುದರ ಬಗ್ಗೆ ಮಾಹಿತಿ ಇದ್ದರೆ, ಈ ಕೆಳಕಂಡ ವಿಳಾಸಗಳಿಗೆ ಮಾಹಿತಿ ನೀಡಬಹುದು.



ಸಿ ಆರ್ ಜೆಡ್ ಅನುಮತಿಗಾಗಿ ಅವಶ್ಯವಾದ ದಾಖಲೆ ಪತ್ರಗಳು ☑

- ☐ ಅರ್ಜಿ ನಮೂನೆ ೧, ಶೀಘ್ರ ಪರಿಸರ ಪರಿಣಾಮ ವರದಿ, ವಿವರವಾದ ಪರಿಸರ ಪರಿಣಾಮ ವರದಿ, ಅಪಘಾತ ನಿರ್ವಹಣಾ ವರದಿ, ನಿರಾಪೇಕ್ಷಣಾ ಪತ್ರ, ನಾಲ್ಕು ಪ್ರತ್ಯೇಕ ಸಿ ಆರ್ ಜೆಡ್ ನಕ್ಷೆಗಳು.
- ☐ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದ ಶಿಫಾರಸುಗಳು (ಪರಿಸರ ಸಂಬಂಧೀ ಅನುಮತಿಗಳು ಈ ಜಾಲತಾಣದಿಂದ ನೋಡಬಹುದು environmentclearance.nic.in)
- ☐ ಕೇಂದ್ರ ಪರಿಸರ ಮಂತ್ರಾಲಯದ ಅನುಮತಿ

(ಹೆಚ್ಚಿನ ವಿವರಗಳಿಗೆ KSCZMA ಜಾಲತಾಣವನ್ನು ನೋಡಿ)

ಅನುಮತಿ ನೀಡಿದ ನಂತರ:

- ☐ ಅನುಮತಿ ನೀಡಿದ ನಂತರದ ಐದು ವರ್ಷದೊಳಗೆ ಯೋಜನೆ ಕಾರ್ಯ ನಿರ್ವಹಣೆ ಶುರು ಮಾಡಿರಬೇಕು.
- ☐ ಕರಾವಳಿ ನಿಯಂತ್ರಣಾ ಪ್ರಾಧಿಕಾರಕ್ಕೆ ಸಲ್ಲಿಸಿದ ಅರ್ಧ ವಾರ್ಷಿಕ ಕಾನೂನು ಪಾಲನಾ ವರದಿ (ಪ್ರತಿ ವರ್ಷದ ಜೂನ್ ೧ ಮತ್ತು ಡಿಸೆಂಬರ್ ೧ನೇ ತಾರೀಖುಗಳಿಗೆ ಸಲ್ಲಿಸಬೇಕು)
- ☐ ಕಾನೂನು ಪಾಲನಾ ವರದಿಯನ್ನು ಜಾಲತಾಣದಲ್ಲಿ ಸೇರಿಸಿರಬೇಕು ksczma.kar.nic.in

| ಮನೆ ನಿರ್ಮಾಣ ಹಾಗು ಮರನಿರ್ಮಾಣ ಮಾಡಲು ಬೇಕಾಗಿರುವ ದಾಖಲತಿಗಳು* | | |
|---|---|---|
| ದಾಖಲೆಗಳು | ಹೊಸ ಕಟ್ಟಡ ನಿರ್ಮಾಣಕ್ಕೆ | ಹಳೆಮನೆ ರಿಪೇರಿ/ಪುನರ್ ನಿರ್ಮಾಣ |
| ಅನುಬಂಧ-೪ (ಸಿ.ಆರ್.ಜೆಡ್ ಅಧಿಸೂಚನೆ, ೨೦೧೧) | ✓ | ✓ |
| ಸಿ.ಆರ್.ಜೆಡ್ ಪ್ರಾದೇಶಿಕ ಕಛೇರಿಯಿಂದ ಪಡೆದುಕೊಳ್ಳಬಹುದು | ನಮೂನೆ-೧ | ನಮೂನೆ-೨ |
| ಆರ್.ಟಿ.ಸಿ ಅಥವಾ ಮಾಲಿಕತ್ವದ ದಾಖಲೆ | ✓ | ✓ |
| ಜಾಗದ ಸರ್ವೆ ನಂಬರು ಇರುವ ಕ್ಷೇತ್ರಮಾಪನಾ ಹಿಸ್ಸಾ ನಕಾಶೆ | ✓ | ✓ |
| ಮೀನುಗಾರಿಕೆ ಒಕ್ಕೂಟ ಅಥವಾ ತೋಟಗಾರಿಕೆ/ಕೃಷಿ ಒಕ್ಕೂಟದಿಂದ ಸಾಂಪ್ರದಾಯಿಕ ವೃತ್ತಿ ಮಾಡುತ್ತಿರುವ ಬಗ್ಗೆ ದಾಖಲೆ | ✓ | |
| ನಿರ್ಮಿಸುತ್ತಿರುವ ಕಟ್ಟಡದ ನೀಲನಕ್ಷೆ/ಕಟ್ಟಡದ ವಿಸ್ತೀರ್ಣದ ನೀಲನಕ್ಷೆ | ✓ | |
| ಕಟ್ಟಡದ ವಿಸ್ತೀರ್ಣದ ನಕ್ಷೆ | | ✓ |
| ತ್ಯಾಜ್ಯವಿಲೇವಾರಿ ಬಗ್ಗೆ ಬದ್ಧತಾ ಪತ್ರ | ✓ | ✓ |
| ಹಳೆ ಕಟ್ಟಡದ ಛಾಯಾಚಿತ್ರ | | ✓ |
| ೧೯೯೦ಕ್ಕೂ ಹಿಂದಿನ ಕರ ಪಾವತಿಸಿದ ಪಾವತಿ | | ✓ |
| ಕಳೆದ ಮೂರು ವರ್ಷದ ಒಳಗಿನ ಮನೆ ಕರ ಪಾವತಿಸಿದ ಪಾವತಿ | | ✓ |
| ೧೯೯೦ಕ್ಕೂ ಹಿಂದಿನ ಕರ ನಿರ್ಧರಣಾ ತಖ್ತೆಯ ನಕಲು ಪ್ರತಿ/ವಿದ್ಯುತ್ ಸಂಪರ್ಕ/ ನೀರು ಸಂಪರ್ಕ ಬಗ್ಗೆ ದೃಢೀಕರಣ ಪ್ರತಿ (ಇವುಗಳು ಲಭ್ಯವಿಲ್ಲದಿದ್ದರೆ ಇವುಗಳಲ್ಲಿ ಯಾವುದಾದರೂ ಒಂದನ್ನು ಪಂಚಾಯತ್ (CRZ-III) ಅಥವಾ ಪುರಸಭೆ (CRZ-II) ಗಳಿಂದ ಪಡೆಯುವಂತದ್ದು) | | ✓ |

ಕಡತ ವಿಲೇವಾರಿ ಶುಲ್ಕವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಶಾಖೆಯಲ್ಲಿ ತುಂಬತಕ್ಕದ್ದು (ಹಣ ಪಾವತಿಸುವ ಮೊದಲು ತಾಲೂಕಾ ಖಜಾನಾ ಅಧಿಕಾರಿಯ ಮುದ್ರೆ ಪಡೆಯತಕ್ಕದ್ದು)

ವಿಸ್ತೀರ್ಣ ೧೦೦೦ ಚದರ ಅಡಿ ಮತ್ತು ಇದಕ್ಕಿಂತ ಕಡಿಮೆ ಇದ್ದರೆ ರೂ. ೧೦೦

ವಿಸ್ತೀರ್ಣ ೧೦೦೦ ಚದರ ಅಡಿಗಿಂತ ಅಧಿಕ ಇದ್ದರೆ ರೂ. ೫೦೦

*ಈ ಎರಡೂ ಪರಿಶೀಲನಾ ಪಟ್ಟಿಯಲ್ಲಿ ಉಲ್ಲೇಖಿಸಿರುವ ದಾಖಲೆಗಳನ್ನು ಈ ಕೆಳಗಿನ ಇಲಾಖೆಯಿಂದ ಪಡೆಯಬೇಕು:

೧) ಸಿ.ಆರ್.ಜೆಡ್ ೨ ಆಗಿದ್ದರೆ ಪುರಸಭೆ/ಪಟ್ಟಣ ಪಂಚಾಯತ್/ನಗರಸಭೆ

೨) ಸಿ.ಆರ್.ಜೆಡ್ ೩ ಆಗಿದ್ದರೆ ಗ್ರಾಮ ಪಂಚಾಯತ್ ಹಾಗೂ ತಹಸೀಲ್ದಾರ್

## ಸಂಪರ್ಕವಿಳಾಸ:

ಕರ್ನಾಟಕ ರಾಜ್ಯ ಕರಾವಳಿ ಪ್ರದೇಶ ನಿರ್ವಹಣ ಪ್ರಾಧಿಕಾರ
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ
೭ನೇ ಮಹಡಿ, ೪ನೇ ಹಂತ, ಎಮ್.ಎಸ್. ಬಿಲ್ಡಿಂಗ್.
ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು – 560001
Tel. No.: 080-22353961, 080-22032206
E-mail: msksczma@gmail.com

ಜಿಲ್ಲಾ ಸಿ ಆರ್ ಜಡ್ ಕಚೇರಿ,
ಮೀರಾ ಬಿಲ್ಡಿಂಗ್, ಮೊದಲನೇ ಮಹಡಿ,
ಸಾವಂತ್ ಆಸ್ಪತ್ರೆ ಎದುರು,
ಕಾಜು ಬಾಗ, ಕಾರವಾರ – 581301
Tel. No.: 08382-223997

ಮುಖ್ಯಾ ಕಾರ್ಯ ಕಾರ್ಯದರ್ಶಿ,
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಇಲಾಖೆ
ಕರ್ನಾಟಕ ಸರಕಾರ,
ಅಧ್ಯಕ್ಷರು, KSCZMA
ರೂಂ ನಂ. ೪೪೮, ೪ನೇ ಮಹಡಿ, ೨ನೇ ಗೇಟ್,
ಎಮ್. ಎಸ್. ಬಿಲ್ಡಿಂಗ್, ಬೆಂಗಳೂರು – 560001
Tel. No.: 080-22256722, 080-22032509
E-mail: prsfee@karnataka.gov.in

ವಿಶೇಷ ನಿರ್ದೇಶಕ (ತಾಂತ್ರಿಕವಿಭಾಗ)
ಅರಣ್ಯ, ಜೀವಿಶಾಸ್ತ್ರ, ಮತ್ತುಪರಿಸರಇಲಾಖೆ.
ಕರ್ನಾಟಕ ಸರಕಾರ ಮತ್ತು ಸದಸ್ಯ ಕಾರ್ಯದರ್ಶಿ.
ಕೆ.ಎಸ್.ಸಿ.ಜೆಡ್. ಎಮ್. ಎ.
ರೂಮ್ನಂ: ೭೧೦, ೭ನೇ ಮಹಡಿ, ನಾಲ್ಕನೇ ಗೇಟು
ಎಮ್. ಎಸ್.ಕಟ್ಟಡ, ಬೆಂಗಳೂರು – 560001
Tel. No.: 080-22353961, 080-22032206
E-mail: msksczma@gmail.com

सर्वे सन्तु निरामया:

SNEHAKUNJA

ಸ್ನೇಹಕುಂಜ ಟ್ರಸ್ಟ್ ಕಾಸರಕೊಡ್

NAMATI

INNOVATIONS IN LEGAL EMPOWERMENT



**ವಿನ್ಯಾಸ:**
ಒಪನ್ ಪ್ರಾಕ್ಟಿಸ್

**ಸಂಶೋಧನೆ, ಯೋಜನಾ ಮಾರ್ಗದರ್ಶನ:**
ಪ್ರೀತಿ ವೆಂಕಟರಾಮ್, ಬಾಲಚಂದ್ರ ಹೆಗಡೆ ಸಾಯಿಮನೆ,
ಮಂಜು ಮೆನನ್

**ಕೃತಜ್ಞತೆಗಳು:**
ಮೀನಾಕ್ಷಿ ಕಪೂರ್, ಮಹಾಬಲೇಶ್ವರ ಹೆಗಡೆ, ವಿನೋದ ಪಟಗಾರ,
ವಿನಯಕ ಎನ್. ಎಮ್, ಮಾರುತಿ ಗೌಡ, ಹರೀಶ್ ಮೊಗೆರ್

**ಇಂಗ್ಲೀಷಿನಿಂದ ಕನ್ನಡಕ್ಕೆ:**
ಬಾಲಚಂದ್ರ ಹೆಗಡೆ ಸಾಯಿಮನೆ, ಮಹಾಬಲೇಶ್ವರ ಹೆಗಡೆ

ಛಾಯಚಿತ್ರ: ಕಾಂಚಿ ಕೊಪ್ಲಿ